

## ವಾಸುದೇವ ಶರ್ಮ ಎನ್.ವಿ.

ಕಲೆ: ಸಂತೋಷ್ ಸಸಿಹಿತ್ಲು



# ಚುಕುಬುಕು ರೈಲು

ಚುಕ್‌ಬುಕ್ ಚುಕ್‌ಬುಕ್
ರೈಲು ಗಾಡಿ ಬಂದಿತು
ಅಮ್ಮ ಅಪ್ಪ ಜೊತೆಗೆ ಏರಿ
ನಮ್ಮೂರಿಗೆ ಹೊರಟೆವು

ಅದೆಷ್ಟು ಜನರು ಬಂದರು
ಚೀಲ ಹೊತ್ತು ತಂದರು
ರೈಲು ಹತ್ತಿ ಕೂರಲು
ಗಾಡಿ ಗುಡುಗುಡು ಹೊರಟಿತು

ಕೂ ಕೂ ಕೂ
ರೈಲು ಬಂಡಿ ಕೂಗಿತು
ದಾರಿಬಿಡಿ ದಾರಿ ಬಿಡಿ
ಹಳಿಯಿಂದ ದೂರವಿರಿ

ರೈಲು ಓಡಿ ಬರುತಿರೆ
ಹಳ್ಳಿ ಊರು ಕಾಡು ಬೆಟ್ಟ
ಕರೆ ನದಿ ಬಯಲು ಗುಡ್ಡ
ಹಿಂದೆ ಹಿಂದೆ ಹೋದವು

ಕಳ್ಳೇಕಾಯಿ ಸೌತೆಕಾಯಿ
ಕಡ್ಲೇಪುರಿ ಚೀಪೇಕಾಯಿ
ಕತೆ ಪುಸ್ತಕ ಚೆಂಡು ಬಟ್ಟೆ
ರೈಲಿನಲ್ಲೇ ಮಾರುಕಟ್ಟೆ

ಹಳಿಯ ಪಕ್ಕ ನಿಂತ ಜನ
ನಗುನಗುತ ಕೈಯ ಬೀಸೆ
ನಾವು ಕೈ ಬೀಸಿ ಬೀಸಿ
ಖುಷಿ ಕುಷಿ ಪಟ್ಟೆವು

ರೈಲು ಊರು ಸೇರಲು
ಎಲ್ಲ ಗಾಡಿ ಇಳಿದೆವು
ರೈಲು ಪಯಣ ಮಜವು ಎನುತ
ಮನೆಗೆ ನಾವು ಹೊರಟೆವು